


ಹೆಂಡತಿ: ನಾವು ಹಣವನ್ನು ಪರ್ಸ್‌ನಲ್ಲಿ ಇಟ್ಟಾಗಲೆಲ್ಲಾ ನಮ್ಮ ಮಗ ಅದನ್ನು ಕದಿಯುತ್ತಾನೆ. ಏನು ಮಾಡಬೇಕೆಂದು ನನಗೆ ಗೊತ್ತಾಗ್ತಿಲ್ಲ.
ಗಂಡ: ಅದನ್ನ ಅವನ ಪುಸ್ತಕಗಳಲ್ಲಿ ಇಡು. ಅವನು ಅದನ್ನು ಎಂದಿಗೂ ಮುಟ್ಟುವುದಿಲ್ಲ ಎಂಬ ನಂಬಿಕೆ ನನಗೆ ಇದೆ.

ಗಂಡ ಮತ್ತು ಹೆಂಡತಿ ನಡುವಿನ ಸಂಬಂಧ ತುಂಬ ಸೈಕಾಲಜಿಕಲ್ ತರಹ ಇರುತ್ತದೆ.
ಹೌದು, ಒಂದು ಸೈಕೋ, ಇನ್ನೊಂದು ಲಾಜಿಕಲ್.

★★★

ಗಂಡ: ನೀನು ನನ್ನ ಜೀವನದ ಚಂದ್ರನಾಗಬಹುದೇ?
ಹೆಂಡತಿ: ವಾವ್! ನಿಜವಾಗಿಯೂ ಆಗುತ್ತೇನೆ.
ಗಂಡ: ಅದ್ಭುತ! ಹಾಗಾದರೆ, 9,955,887 ಕಿ.ಮೀ ನನ್ನಿಂದ ದೂರ ಇರು!

★★★

ಪೊಲೀಸ್ ಅಧಿಕಾರಿ: ನಾನು ಜನರನ್ನು ಬಂಧಿಸುತ್ತೇನೆ. ಆದರೆ ಮನೆಗೆ ಹೋದಾಗ, ನಾನು ಹೆಂಡತಿಯಿಂದ ಗೃಹಬಂಧನದಲ್ಲಿ ಇರುತ್ತೇನೆ.
ಪ್ರೊಫೆಸರ್: ನಾನು ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡುತ್ತೇನೆ, ಆದರೆ ಮನೆಗೆ ಹೋದಾಗ, ಹೆಂಡತಿಯಿಂದ ಗಂಟೆಗಳಷ್ಟು ಉಪನ್ಯಾಸ ಪಡೆಯುತ್ತೇನೆ.
ಸಿಇಒ: ನಾನು ಕಂಪನಿಯೊಂದಕ್ಕೆ ಬಾಸ್. ಆದರೆ ಮನೆಯಲ್ಲಿ ನಾನು ಯಾವಾಗಲೂ ಹೆಂಡತಿಯ ಉದ್ಯೋಗಿ ಎಂಬಂತೆ ಭಾಸವಾಗುತ್ತದೆ!

★★★

ತನ್ನನ್ನು ಕೊಲ್ಲಲು ಮುಂದಾಗಿರುವ ಮನುಷ್ಯನಿಗೆ ಜಿರಳೆಯ ಕೊನೆಯ ಮಾತುಗಳು.
'ಹೇ ಹೇಡಿ, ನನ್ನನ್ನು ಕೊಲ್ಲು! ಅದಕ್ಕಾಗಿ ಅಸೂಯೆ ಪಡಬೇಡ. ನಿನ್ನ ಹೆಂಡತಿ ನನಗೆ ಹೆದರುತ್ತಾಳೆ ಮತ್ತು ನಿನಗಲ್ಲ'

★★★

ರೋಗಿ: ದೀರ್ಘಾಯುಷಿಯಾಗಲು ಏನಾದರೂ ಔಷಧಿ ಇದೆಯೇ?
ವೈದ್ಯ: ಮದುವೆಯಾಗು.
ರೋಗಿ: ಅದು ಹೇಗೆ ಸಹಾಯ ಮಾಡುತ್ತದೆ?
ವೈದ್ಯ: ನಿಂಗೆ ಅಂತಹ ಆಲೋಚನೆಗಳೇ ಬರೋದಿಲ್ಲ.

★★★

ವೈದ್ಯರಿಗೆ ಮಹಿಳೆ: ನನ್ನ ಗಂಡನಿಗೆ ನಿದ್ರೆಯಲ್ಲಿ ಮಾತನಾಡುವ ಅಭ್ಯಾಸವಿದೆ! ಗುಣಪಡಿಸಲು ನಾನು ಅವರಿಗೆ ಏನು ಮಾಡಬೇಕು?
ಡಾಕ್ಟರ್: ಅವರು ಎಚ್ಚರವಾಗಿರುವಾಗ ಮಾತನಾಡಲು ಅವರಿಗೆ ಅವಕಾಶ ನೀಡಿ.

(ಸಂಗ್ರಹ)
ವಿಜಯಕುಮಾರ್ ಎಸ್. ಅಂಟಿನ, ಬೆಂಗಳೂರು

